ದಿನಾಂಕ : 10/02/2023
ಎಸ್.ಸಿ. ಸಂಖ್ಯೆ : 32/2022
ಪಿ..ಡ ಬ್ಲ್ಯೂ : 2
ಸಾಕ್ಷಿ : ಶ್ರೀನಿವಾಸಶೆಟ್ಟಿ

ಸಾಕ್ಷಿಯನ್ನು ದಿನಾಂಕಃ 10/02/2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಪ್ರತಿವಾದಿಯು ವಾದಿಯಿಂದ ರೂ.20,000/- ಸಾಲ ಪಡೆದು ಪ್ರಾಮಿಸರಿ ನೋಟ್ ಬರೆದುಕೊಟ್ಟಿರುತ್ತಾರೆ. ಅದನ್ನು ನೋಡಿ ಗುರುತಿಸಿದ್ದು, ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ನಿಪಿ-1 ಕ್ಕೆ ಪ್ರತಿವಾದಿ ಮೂರು ಕಡೆ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ನಿಪಿ-1 ಕ್ಕೆ ನಾನು ಮತ್ತು ರಘು ಎಂಬುವವರು ಸಾಕ್ಷಿದಾರರಾಗಿ ಹಾಗೂ ದಾಸಪ್ಪ ಎಂಬುವವರು ಪತ್ರಬರಹಗಾರರಾಗಿ ಸಹಿಗಳನ್ನು ಮಾಡಿರುತ್ತೇವೆ. ಸದರಿ ಹೆಬ್ಬೆಟ್ಟು ಗುರುತು ಮತ್ತು ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-1 ಎ ಯಿಂದ ನಿಪಿ-1 ಎಫ್ ಎಂದು ಗುರುತಿಸಲಾಗಿದೆ.

**ಪ್ರತಿವಾದಿಯು ಏಕಪಕ್ಷಿಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.
ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.